# ಇಂದಿನ ನಾಡಗೀತೆಗಳು ಯಾಂತ್ರಿಕ

ವಾಕ್ ಮತ್ತು ಅರ್ಥ ಪರಸ್ಪರ ಬೇರ್ಪಡದಂತೆ ಬೆಸೆದುಕೊಂಡಿರುವ ಹಾಗೆ, ದೇಹ, ಪ್ರಾಣ, ಹಾಗೂ ಅದರಿಂದ ಹೊಮ್ಮುವ ವಾಣಿ ಒಂದಾಗಿಯೇ ಇರುವ ಹಾಗೆ ನಾಡು–ನುಡಿಗಳೆರಡೂ ಅಭಿನ್ನವಾಗಿ ಬೆಸೆದುಕೊಂಡಿವೆ. ಇದಕ್ಕೆ ಪರಕೀಯರಿಂದ ಅಥವಾ ಪರಭಾಷೆಯಿಂದ ಅಡ್ಡಿಯುಂಟಾಗುವಂಥ ಸಂದರ್ಭ ಬಂದಾಗಲೆಲ್ಲ, ಇತರ ಎಲ್ಲ ನಾಡು – ನುಡಿಯ ಪ್ರೇಮಿಗಳಂತೆ ಕವಿಗಳೂ ತೀವ್ರವಾಗಿ ಪ್ರತಿಕ್ರಿಯಿಸಿದ್ದಾರೆ. 'ರಕ್ಷಿಸು ಕರ್ನಾಟಕ ದೇವಿ' ಎಂದು ಮರಾಠಿ ಭಾಷೆಯ ಹಾಗೂ ಆಂಗ್ಲ ಭಾಷೆಯ ಆಕ್ರಮಣದ ವಿರುದ್ಧ ಕೂಡಾ ಮೊತ್ತಮೊದಲಿಗೆ ಸ್ವರವೆತ್ತಿದವರಲ್ಲಿ ಒಬ್ಬರಾಗಿರುವ ಶಾಂತ ಕವಿ ಕಾವ್ಯ ನಾಮದ ಸಕ್ಕರಿ ಬಾಳಾಚಾರ್ಯರಿಂದ ಹಿಡಿದು, ಇಂದು ಹೊಸದಾಗಿ ಬರೆಯುತ್ತಿರುವವರ ತನಕ ಬಹುತೇಕ ಎಲ್ಲಾ ಹಿರಿಯ ಕಿರಿಯ ಕವಿಗಳು ಕೂಡಾ ನಾಡು – ನುಡಿಯ ಕುರಿತು ಅಭಿಮಾನ ಉಕ್ಕುವಂತಹ ಗೀತೆಗಳನ್ನು ರಚಿಸಿದ್ದಾರೆ. ಈ ಗೀತ ಗುಚ್ಛದಲ್ಲಿ ನನ್ನ ಕೆಲವು ಗೀತೆಗಳೂ ಸೇರಿವೆ.

ಹಿಂದಿನ ಆ ಹಾಡುಗಳಲ್ಲಿ ಭಾವ ತೀವ್ರತೆಯಿತ್ತು, ಉಕ್ಕುವ ಅಭಿಮಾನವಿತ್ತು. ಮತ್ತೆ ಮತ್ತೆ ನೆನಪಿಸಿಕೊಂಡು ಪುಳಕಗೊಳ್ಳುವ ನಾಡಿನ ಭವ್ಯ ಇತಿಹಾಸದ ನೆನಪುಗಳಿದ್ದವು. ಇವು ಎಲ್ಲರಿಗೆ ಸ್ಫೂರ್ತಿಯ ಸೆಲೆಗಳಾಗಿದ್ದವು. ಹೊಸನಾಡನ್ನು ಕಟ್ಟುವಲ್ಲಿ ಅಗತ್ಯವಾದ ಉಜ್ವಲ ಕನಸುಗಳನ್ನು ನಾಡ ಜನರಿಗೆ ಕಟ್ಟಿ ಕೊಟ್ಟಿದ್ದವು.

ಆದರೆ ಇಂದು ರಚನೆಯಾಗುತ್ತಿರುವ ನಾಡಗೀತೆಗಳಲ್ಲಿ ಆ ತೀವ್ರತೆ, ಆ ಕನಸುಗಾರಿಕೆ, ನಾಡು – ನುಡಿಯ ಕುರಿತಾದ ಹೊಸ ಹುರುಪು ಮಾಯವಾಗಿ, ಯಾಂತ್ರಿಕತೆ ಕಾಣಿಸುತ್ತಿದೆ ಎಂದು ನನಗನ್ನಿಸುತ್ತಿದೆ. ನನ್ನ ರಚನೆಗಳೂ ಇದಕ್ಕೆ ಹೊರತಲ್ಲ. ಇಂದಿನ ಕಾಲಕ್ಕೆ ಅನುಗುಣವಾದ ಹೊಸ ನುಡಿಗಟ್ಟುಗಳು, ಅದಕ್ಕನುಗುಣವಾದ ಭಾಷೆ, ಹೊಸ ಕನಸುಗಳು ದಕ್ಕದೆ, ಅದೆ ಅದೇ ಸವೆದ ಭಾಷೆ ಹಾಗೂ ನುಡಿಗಟ್ಟುಗಳಲ್ಲೇ ಕಳೆದು ಹೋಗುತ್ತಿದ್ದೇವೇನೋ ಎನ್ನುವ ಆತಂಕ ನನ್ನದು.

ನಾಡು – ನುಡಿಯ ಕುರಿತಾದ ಇಂದಿನ ಅನುಭವಗಳು, ಆಸಕ್ತಿಗಳಿಗನುಗುಣವಾದ ಹೊಸ ನುಡಿಗಟ್ಟುಗಳನ್ನು, ಅದಕ್ಕೆ ಹೊಂದುವ, ಉಜ್ಜಿ ಹೊಳಪುಗೊಳಿಸಿದ ಭಾಷೆಯನ್ನು ಇಂದು ಬರೆಯುತ್ತಿರುವ ಕವಿಗಳು ರೂಢಿಸಿಕೊಳ್ಳಬೇಕಾದ ಆವಶ್ಯಕತೆ ಹಿಂದೆಂದಿಗಿಂತ ಇಂದು ಹೆಚ್ಚಾಗಿದೆ.

✿